RNU AIR DHARWAD

JULY 07, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ದೇಶದ ವಿವಿಧ ರಾಜ್ಯಗಳಲ್ಲಿ, ನೂರಾ ಐವತ್ತಕ್ಕೂ ಹೆಚ್ಚು, ತೂಗು ಸೇತುವೆಗಳನ್ನು ನಿರ್ಮಿಸಿ, ಬ್ರಿಡ್ಜ್ ಮ್ಯಾನ್ ಆಫ್ ಇಂಡಿಯಾ ಎಂದೇ ಪ್ರಸಿದ್ಧಿ ಪಡೆದಿದ್ದ, ಪದ್ಮಶ್ರೀ ಪುರಸ್ಕೃತ, ದಕ್ಷಿಣಕನ್ನಡ ಜಿಲ್ಲೆ, ಸುಳ್ಯದ ಡಾಕ್ಟರ್ ಗಿರೀಶ ಭಾರದ್ವಾಜ, ಇಂದು ಬೆಳಗ್ಗೆ ಸುಳ್ಯದ ಖಾಸಗಿ ಆಸ್ಪತ್ರೆಯಲ್ಲಿ, ನಿಧನರಾಗಿದ್ದಾರೆ. ಅವರಿಗೆ 76 ವ ‘ರ್ ವಯಸ್ಸಾಗಿತ್ತು. ಗ್ರಾಮೀಣ ಮತ್ತು ದುರ್ಗಮ ಪ್ರದೇಶಗಳಲ್ಲಿ, ಕಡಿಮೆ ವೆಚ್ಚದ ತೂಗು ಸೇತುವೆಗಳನ್ನು ನಿರ್ಮಿಸಿ, ಜನರ ನೆಮ್ಮದಿಯ ಬದುಕಿಗೆ ಆಸರೆಯಾಗಿದ್ದ ಅವರನ್ನು, ಜನ ಶರಸೇತು ಸರದಾರ ಎಂದೇ, ಅಭಿಮಾನದಿಂದ ಕರೆದಿದ್ದರು.

<><><>

ಗ್ರಾಮಗಳ ಉನ್ನತಿಯೇ, ರಾಷ್ಟ್ರದ ಉನ್ನತಿ ಎಂಬ ಧ್ಯೇಯದೊಂದಿಗೆ, ಪಂಚಾಯತಿರಾಜ್ ವ್ಯವಸ್ಥೆ ಜಾರಿಗೊಂಡ ಬಳಿಕ, ಗ್ರಾಮೀಣ ಭಾಗದ ಸಮಗ್ರ ಅಭಿವೃದ್ಧಿಗೆ, ಸ್ಥಳೀಯ ಸರ್ಕಾರ ಯೋಜನೆ ರೂಪಿಸಿ, ಅನುಷ್ಠಾನಗೊಳಿಸುವ ಅಧಿಕಾರ ಪ್ರಾಪ್ತವಾಯಿತು. ವಿಶ್ವ ಗ್ರಾಮೀಣಾಭಿವೃದ್ಧಿ ದಿನಾಚರಣೆ ಹಿನ್ನೆಲೆ, ಗ್ರಾಮೀಣಾಭಿವೃದ್ಧಿಯ ತಜ್ಞ, ಕಾರ್ಯಕರ್ತ, ವಿಜಯಪುರದ ನರಸಿಂಹ ರಾಯಚೂರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಹಾವೇರಿ ಜಿಲ್ಲೆಯಲ್ಲಿ, ಸಂಸದರು ಮತ್ತು ಶಾಸಕರ ಸಹಕಾರದಿಂದ, ಮೋಡ ಬಿತ್ತನೆ ಕೈಗೊಳ್ಳಲಾಗಿದ್ದು, ಮೊದಲ ದಿನ 1 ಗಂಟೆ 18 ನಿಮಿ ‘ ಹಾರಾಟ ನಡೆಸಿದ ಮೇ ‘ ವಿಮಾನ, ಹೈಟ್ರೊಸ್ಕೋಪಿಕ್ ರಾಸಾಯನಿಕ ಬಳಸಿ, ಹಲವು ಕಡೆ ಮೋಡ ಬಿತ್ತನೆ ಕೈಗೊಂಡಿದೆ ಎಂದು, 'ಖ್ಯಾತಿ ಕ್ಲೈಮೆಟ್ ಮಾಡಿಫಿಕೇ ‘ನ್ ಕನ್ಸ್‌ಲ್ಟಂಟ್ ಸಂಸ್ಥೆ'ಯ ಪಾಲುದಾರರೂ ಆಗಿರುವ, ಶಾಸಕ ಪ್ರಕಾಶ ಕೋಳಿವಾಡ, ತಿಳಿಸಿದ್ದಾರೆ. ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿದ ವಿಮಾನ, ಹಾನಗಲ್ ಮತ್ತು ಸವಣೂರು ತಾಲೂಕುಗಳಲ್ಲಿ, ತಲಾ 4 ಬಾರಿ ಹಾಗೂ ಹಾವೇರಿ ಮತ್ತು ರಾಣೆಬೆನ್ನೂರು ತಾಲೂಕುಗಳಲ್ಲಿ, ತಲಾ 2 ಬಾರಿ ರಾಸಾಯನಿಕ ಸಿಂಪಡಿಸಿತು. ನಾಲ್ಕು ಸಾವಿರ ಅಡಿ ಎತ್ತರದಲ್ಲಿ ವಿಮಾನ ಹಾರಾಟ ನಡೆಸಿದ್ದು, ದಾಖಲಾಗಿದೆ.

<><><>

ಕಲಬುರಗಿಯ ಪಿ.ಡಿ.ಎ. ಕಾಲೇಜಿನಲ್ಲಿ, ಕಾನೂನು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ, "ತರಗತಿ ಕೊಠಡಿಯಿಂದ, ನ್ಯಾಯಾಲಯದ ಕೋಣೆಗೆ: ಸಾಮಾಜಿಕ ನ್ಯಾಯಕ್ಕೆ ವೇಗವರ್ಧಕರಾಗಿ ಕಾನೂನು ವಿದ್ಯಾರ್ಥಿಗಳು", ಧ್ಯೇಯದ, ಐದನೇ ವಲಯ ಮಟ್ಟದ ಕಾರ್ಯಾಗಾರಕ್ಕೆ, ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ವಿಭು ಭಕ್ರು, ಚಾಲನೆ ನೀಡಿದರು.

<><><>

ರಾಜ್ಯ ಲಲಿತಕಲಾ ಅಕಾಡೆಮಿ, ಚಿತ್ರಕಲಾ ವಿದ್ಯಾರ್ಥಿಗಳಿಗಾಗಿ, ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ ಆಯೋಜಿಸಿದೆ. ಅಕಾಡೆಮಿ ರಜಿಸ್ಟಾರ್ ಎನ್.ನಮ್ರತಾ, ಮಾಹಿತಿ ನೀಡಿದ್ದು, ರಾಜ್ಯದ ಚಿತ್ರಕಲಾ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಮುಕ್ತ ಅವಕಾಶವಿದ್ದು, ಅರ್ಜಿ ಸಲ್ಲಿಸಲು, ಆಗಸ್ಟ್ 6 ಕೊನೆ ದಿನವಾಗಿದೆ. ಜಾಲತಾಣ www.lalitkala.karnataka.gov.in ಮೂಲಕ, ಅರ್ಜಿ ಸಲ್ಲಿಸಬಹುದು.

<><><>

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಕೇಂದ್ರ ಕಾರ್ಯಾಲಯದ ವತಿಯಿಂದ, ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ತಂಡಗಳಿಗೆ, ಪ್ರತಿಷ್ಠಿತ ಚತುರ್ಥ ಚರಣ್, ಹೀರಕ್ ಪಂಖ್ ಹಾಗೂ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರಮಾಣ ಪತ್ರ ಪ್ರದಾನ ಸಮಾರಂಭ, 10ನೇ ತಾರೀಖಿನಂದು, ಸಂಜೆ 4 ಗಂಟೆಗೆ, ಬೆಂಗಳೂರಿನ ಲೋಕಭವನದ, ಗಾಜಿನ ಮನೆಯಲ್ಲಿ ಆಯೋಜಿಸಲಾಗಿದೆ. ರಾಜ್ಯಪಾಲ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಪೋ ‘ಕರಾದ, ಥಾವರ್‌ಚಂದ್ ಗೆಹ್ಲೋಟ್ ಅವರು ಪಾಲ್ಗೊಂಡು, ಪ್ರಶಸ್ತಿಗಳನ್ನು ಪ್ರದಾನಿಸಲಿದ್ದಾರೆ. ಮುಖ್ಯಮಂತ್ರಿಗಳು ಹಾಗೂ ಸಂಸ್ಥೆಯ ಅಧ್ಯಕ್ಷರಾದ, ಡಿ.ಕೆ. ಶಿವಕುಮಾರ, ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

<><><>

ದಾವಣಗೆರೆ ಜಿಲ್ಲೆಯಲ್ಲಿ, ಮುಂಗಾರು ಮಳೆಯ ತೀವ್ರ ಕೊರತೆ ಹಿನ್ನೆಲೆ, ಬೆಳೆ ವಿಮೆ ನೋಂದಣಿ ಅವಧಿಯನ್ನು, ಈ ತಿಂಗಳ 15ನೇ ತಾರೀಖಿನ ವರೆಗೆ ವಿಸ್ತರಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದ್ದಾರೆ.

<><><>

ಮಂಡ್ಯ ಜಿಲ್ಲೆಯಲ್ಲಿ, ರಾಗಿ, ಜೋಳ, ಮೆಕ್ಕೆಜೋಳ, ತೊಗರಿ, ಅಲಸಂದೆ ಮತ್ತು ಹುರುಳಿ ಸೇರಿದಂತೆ, ಹತ್ತು ಪರ್ಯಾಯ ಬೆಳೆಗಳನ್ನು ಗುರುತಿಸಲಾಗಿದ್ದು, ಬೆಳೆ ಆಯ್ಕೆಯಲ್ಲಿ ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ ತಿಳಿಸಿದ್ದಾರೆ.

<><><>

ಕೇಂದ್ರ ಸರ್ಕಾರದ, ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕಿನಲ್ಲಿ, 829 ರೈತರಿಂದ, 15 ಸಾವಿರದ 766 ಕ್ವಿಂಟಾಲ್ ರಾಗಿ ಖರೀದಿಸಲಾಗಿದೆ. 7 ಕೋಟಿ 59 ಲಕ್ಷ ರೂಪಾಯಿ, ರೈತರ ಖಾತೆಗಳಿಗೆ, ನೇರ ಜಮೆಯಾಗಿದೆ.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಹಿನ್ನೆಲೆ, ಜಿಲ್ಲಾ ಸ್ವೀಪ್ ಸಮಿತಿ, ಜನ ಜಾಗೃತಿ ಜಾಥಾವನ್ನು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಡಾಕ್ಟರ್ ದಿಲೀಷ ಶಶಿ, ಉದ್ಘಾಟಿಸಿದರು.

<><><>

ಚಾಮರಾಜನಗರ ಜಿಲ್ಲೆ, ಯಳಂದೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ, 'ಮೊಬೈಲ್ ಬಿಡಿ; ಪುಸ್ತಕ ಹಿಡಿ' ಸಂವಾದ ಕಾರ್ಯಕ್ರಮಕ್ಕೆ, ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ, ಚಾಲನೆ ನೀಡಿದರು.

<><><>

ಮೈಸೂರು-ಕೊಡಗು, ಲೋಕಸಭಾ ಕ್ಷೇತ್ರದ ಸಂಸದ, ಯದುವೀರ ಒಡೆಯರ, ಮಡಿಕೇರಿಯಲ್ಲಿ ಜರುಗಿದ, ಮಾನವ-ವನ್ಯಜೀವಿ ಸಂಘರ್ಷ ಪರಿಹಾರ, ಮೂಲಸೌಕರ್ಯ ಸಮಸ್ಯೆ ಇತ್ಯರ್ಥ ಜನಾಗ್ರಹ ಸಭೆಯಲ್ಲಿ, ಪಾಲ್ಗೊಂಡಿದ್ದರು.

<><><>

ಚಾಮರಾಜನಗರದ, ಬಿ.ಆರ್. ಅಂಬೇಡ್ಕರ ಜಿಲ್ಲಾ ಕ್ರೀಡಾಂಗಣದಲ್ಲಿ, ಈಜುಗೊಳ ಸೇರಿದಂತೆ, ಒಟ್ಟು 15 ಕೋಟಿ ರೂಪಾಯಿ ಕಾಮಗಾರಿಗೆ, ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.